# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 351 |
| 2 | ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 16-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬಿ.ಬಿ.ಎಂ.ಪಿ.,ಯಲ್ಲಿ 2020ರ ಅನ್ವಯ ವೃಂದವಾರು ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿ 2020ರ ಅನ್ವಯ ವೃಂದವಾರು ಒಟ್ಟು ಮಂಜೂರಾದ ಹುದ್ದೆಗಳು, ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಮತ್ತು ಖಾಲಿ ಇರುವ ಹುದ್ದೆಗಳ ವಿವರಗಳನ್ನು ಈ ಕೆಳಕಂಡಂತಿರುತ್ತದೆ.
<table>
<tr><th>ಕ್ರ ಸಂ</th><th>ವೃಂದ</th><th>ಮಂಜೂರಾತಿ ಹುದ್ದೆಗಳ ವಿವರ</th><th>ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ</th><th>ಖಾಲಿ ಇರುವ ಹುದ್ದೆಗಳ ವಿವರ</th></tr>
<tr><td>1)</td><td>ಗ್ರೂಪ್-ಎ</td><td>849</td><td>614</td><td>235</td></tr>
<tr><td>2)</td><td>ಗ್ರೂಪ್-ಬಿ</td><td>783</td><td>498</td><td>285</td></tr>
<tr><td>3)</td><td>ಗ್ರೂಪ್-ಸಿ</td><td>3858</td><td>2426</td><td>1432</td></tr>
<tr><td>4)</td><td>ಗ್ರೂಪ್-ಡಿ</td><td>7470</td><td>2997</td><td>4473</td></tr>
<tr><td></td><td>ಒಟ್ಟು</td><td>12960</td><td>6535</td><td>6425</td></tr>
</table>
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ಭರ್ತಿ ಮಾಡಲು ಪಾಲಿಕೆಯಿಂದ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.</td></tr>
<tr><td>ಆ)</td><td>ಪಾಲಿಕೆಯ ವಾರ್ಡ್ ಮರುವಿಂಗಡಣೆಯಾಗಿ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಾಗಿ ಹೆಚ್ಚುವರಿಯಾಗಿ 45 ವಾರ್ಡ್‌ಗಳನ್ನು ರಚಿಸಲಾಗಿದ್ದು, ಹೊಸ 45 ವಾರ್ಡ್‌ಗಳಿಗೆ ವೃಂದವಾರು ಅಗತ್ಯವಿರುವ ಹುದ್ದೆಗಳ ಸೃಜನೆಗೆ ಹಾಗೂ ನೇಮಕಾತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಮರುವಿಂಗಡಣೆಯಾಗಿ 198 ವಾರ್ಡ್‌ಗಳಿಂದ 243 ವಾರ್ಡ್‌ಗಳಾಗಿ ಹೆಚ್ಚುವರಿಯಾಗಿ 45 ವಾರ್ಡ್‌ಗಳನ್ನು ರಚಿಸಲಾಗಿದ್ದು, ಹೊಸ 45 ವಾರ್ಡ್‌ಗಳಿಗೆ ವೃಂದವಾರು ಅಗತ್ಯವಿರುವ ವಾರ್ಡ್ ಮಟ್ಟದ ಮತ್ತು ಉಪ ವಿಭಾಗಕ್ಕೆ ಹುದ್ದೆಗಳ ಸೃಜನೆಗೆ ಹಾಗೂ ನೇಮಕಾತಿಗೆ ಸಂಬಂಧಿಸಿದಂತೆ ಪಾಲಿಕೆಯಿಂದ ದಿನಾಂಕ: 22-12-2022 ರಂದು ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.</td></tr>
</table>

...2.

**ಇ)** ಬಿ.ಬಿ.ಎಂ.ಪಿ.ಯಲ್ಲಿ ಎಷ್ಟು ಮಾರ್ಷಲ್‌ಗಳು, ಸೂಪರ್ ವೈಸರ್‌ಗಳು ಹಾಗೂ ಮುಖ್ಯ ಮಾರ್ಷಲ್‌ಗಳು ಕಾರ್ಯನಿರ್ವಹಿಸುತ್ತಿದ್ದಾರೆ; ಇವರು ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ನೀಡಲಾಗಿರುವ ಆದೇಶದ ಪ್ರತಿ ಹಾಗೂ ಇವರುಗಳಿಗೆ ನೀಡಲಾಗುತ್ತಿರುವ ವೇತನ ಇತರ ಭತ್ಯೆಗಳ ವಿವರ ನೀಡುವುದು; ಮಾರ್ಷಲ್‌ಗಳನ್ನು ಯಾವ ಏಜೆನ್ಸಿಗಳ ಮೂಲಕ ನಿಯೋಜಿಸಿಕೊಳ್ಳಲಾಗಿದೆ; ಸದರಿ ಏಜೆನ್ಸಿಯನ್ನು ಆಯ್ಕೆ ಮಾಡಿಕೊಳ್ಳಲು ಅನುಸರಿಸಿರುವ ಮಾನದಂಡ ವಿಧಾನಗಳೇನು?

ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾರ್ಷಲ್‌ಗಳ ಸಂಖ್ಯೆ-451, ಮಾರ್ಷಲ್ ಸೂಪರ್ ವೈಸರ್‌ಗಳ ಸಂಖ್ಯೆ-32, ಸದರಿಯವರ ಸೇವೆಯನ್ನು ಮೆ॥ ಕರ್ನಾಟಕ ಎಕ್ಸ್ ಸರ್ವೀಸ್ ಮ್ಯಾನ್ ವೆಲ್‌ಫೇರ್ ಸೋಸೈಟಿ ರವರಿಂದ ಪಡೆಯಲಾಗಿರುತ್ತದೆ.

ಮಾರ್ಷಲ್, ಮಾರ್ಷಲ್ ಸೂಪರ್ ವೈಸರ್ ರವರುಗಳ ವೇತನದ ವಿವರ ಈ ಕೆಳಕಂಡಂತಿದೆ. (ಕಾರ್ಯದೇಶದ ಪ್ರತಿ, ಅಗ್ರಿಮೆಂಟ್ ಪ್ರತಿಯನ್ನು ಹಾಗೂ ಏಜೆನ್ಸಿಯನ್ನು ಆಯ್ಕೆ ಮಾಡಲು ಅನುಸರಿಸುವ ಮಾನದಂಡದ ವಿಧಾನಗಳನ್ನು **ಅನುಬಂಧ-1 ರಲ್ಲಿ ನೀಡಿದೆ**).

| ಹುದ್ದೆಯ ಹೆಸರು | ಮಾಸಿಕ ವೇತನ | ಸಂಖ್ಯೆ | ಒಟ್ಟು |
|---|---|---|---|
| ಮಾರ್ಷಲ್ | 25000 | 451 | 1,12,75,000/- |
| ಮಾರ್ಷಲ್ ಸೂಪರ್‌ವೈಸರ್ | 45475 | 32 | 14,55,200/- |
| ಮಾಸಿಕ | | | 1,27,30,200/- |
| ವಾರ್ಷಿಕ | | | 15,27,62,400/- |

**ಈ)** ಬಿ.ಬಿ.ಎಂ.ಪಿ. ವ್ಯಾಪ್ತಿಯ ಇಂದಿರಾ ಕ್ಯಾಂಟೀನ್‌ಗಳ ಸಂಖ್ಯೆ ಎಷ್ಟು, ಪ್ರತಿದಿನ ಸರಬರಾಜು ಆಗುತ್ತಿರುವ ಉಪಹಾರ ಮತ್ತು ಊಟದ ಪ್ರಮಾಣ ಎಷ್ಟು; ಇಂದಿರಾ ಕ್ಯಾಂಟೀನ್‌ಗಳಿಗೆ ಪಾಳಿ ವ್ಯವಸ್ಥೆಯಂತೆ ನಿಯೋಜನೆ ಮಾರ್ಷಲ್‌ಗಳ ಸಂಖ್ಯೆ, ಮಾಸಿಕ ಹಾಗೂ ವಾರ್ಷಿಕವಾಗಿ ಪಾವತಿಸಲಾಗುತ್ತಿರುವ ವೇತನ ಮತ್ತು ಭತ್ಯೆ ವಿವರ ನೀಡುವುದು;

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 169 ಇಂದಿರಾ ಕ್ಯಾಂಟೀನ್‌ಗಳು ಕಾರ್ಯ ನಿರ್ವಹಿಸುತ್ತಿರುತ್ತದೆ.

ಪ್ರತಿ ದಿನ ಸರಬರಾಜು ಆಗುತ್ತಿರುವ ಉಪಹಾರ ಮತ್ತು ಊಟದ ಪ್ರಮಾಣದ ವಿವರವನ್ನು **ಅನುಬಂಧ-2 ರಲ್ಲಿ ನೀಡಿದೆ.**

ಇಂದಿರಾ ಕ್ಯಾಂಟೀನ್‌ಗಳಿಗೆ ಪಾಳಿ ವ್ಯವಸ್ಥೆಯಂತೆ ಡಿಸೆಂಬರ್ 2022ರ ಮಾಹೆಯಲ್ಲಿ ನಿಯೋಜನೆ ಮಾಡಿರುವ ಮಾರ್ಷಲ್‌ಗಳ ಸಂಖ್ಯೆ: 392.

**Indira Canteen Chief Officer, Supervisor and Marshal details**

Chief Officer- 01 Salary - Rs.99850
JCO Supervisor 32 Salary - Rs. 44975 (per 1 supervisor)
Canteen Marshals 401 Salary - Rs.25000 (per 1 Marshal)
Kitchen Marshals 94 Salary - Rs.25000 (per 1 Marshal)
Chief Officer -01 Salary - Rs.99850*1 = 99,850/-
JCO Supervisor 32 Salary - Rs. 44975*32 =14,39,200/-
Canteen Marshals 401 Salary -Rs.25000*401 =1,00,25,000/-
Kitchen Marshals 94 Salary - Rs.25000*94 = 23,50,000/-
Total 139,14,050/-
GST 18% 25,04,529/-

**Grand Total per Month 1,64,18,579/-**

**Per Annum Rs.16418579X12= 19,70,22,948/-**

| | | |
|---|---|---|
| ಉ) | ಮಾರ್ಷಲ್‌ಗಳು ನೇಮಕವಾಗಿರುವ ದಿನದಿಂದ ತಹಲ್‌ವರೆಗೂ ಸಾರ್ವಜನಿಕರಿಗೆ/ ಇತರರಿಗೆ ವಿಧಿಸಿರುವ ದಂಡದ ಮೊತ್ತವೆಷ್ಟು; ಯಾವ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ; ಜಮಾ ಮಾಡಲಾದ ಮೊತ್ತಕ್ಕೆ ಅದರ ಆಡಿಟ್ ವರದಿಯನ್ನು ನೀಡುವುದು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾರ್ಷಲ್‌ಗಳು ನೇಮಕವಾಗಿರುವ ದಿನದಿಂದ ಅಂದರೆ, Sep-2019 ರಿಂದ Jan-2023 ತಹಲ್‌ವರೆವಿಗೆ ಸಾರ್ವಜನಿಕರಿಗೆ, ಅಪಾರ್ಟ್‌ಮೆಂಟ್‌ಗಳಿಗೆ ಹಾಗೂ ಉದ್ದಿಮೆಗಳಿಗೆ ವಿಧಿಸಲಾಗಿರುವ ದಂಡದ ಮೊತ್ತ-27,19,34,154.000/-<br><br>ಸ್ವೀಕರಿಸಲಾದ ಮೊತ್ತವನ್ನು ಎಚ್.ಡಿ.ಎಫ್.ಸಿ ಬ್ಯಾಂಕ್‌ನ ಆಯುಕ್ತರು, ಬಿಬಿಎಂಪಿ ವಸೂಲಿ ಖಾತೆ ಸಂ.50100318608786 ಖಾತೆಗೆ ಜಮಾ ಮಾಡಲಾಗಿರುತ್ತದೆ.<br><br>ಜಮಾ ಮಾಡಲಾದ ಮೊತ್ತ-ರೂ. 27,19,34,154.000/- ಕ್ಕೆ ಸಂಬಂಧಿಸಿದಂತೆ ಮಾರ್ಚ-22ರ ವರೆಗಿನ ದಂಡದ ಮೊತ್ತದ ಆಡಿಟ್ ನಡೆಸಲಾಗಿದ್ದು, ಆಡಿಟ್ ವರದಿ ಸಲ್ಲಿಕೆಯಾಗಬೇಕಾಗಿರುತ್ತದೆ. |
| ಊ) | ಬಿ.ಬಿ.ಎಂ.ಪಿ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ಪರಿವೀಕ್ಷಕರು, ಹಿರಿಯ ಆರೋಗ್ಯ ಪರಿವೀಕ್ಷಕರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘ.ತ್ಯಾ.ನಿ). ಅಧೀಕ್ಷಕ ಅಭಿಯಂತರರು, ಆರೋಗ್ಯ ವೈದ್ಯಾಧಿಕಾರಿಗಳೂ, ಉಪ ಆರೋಗ್ಯಾಧಿಕಾರಿಗಳು, ಆರೋಗ್ಯಾಧಿಕಾರಿ ಹುದ್ದೆಗಳಿಗೆ ಮಂಜೂರಾದ ಒಟ್ಟು ಹುದ್ದೆಗಳು ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು; ಸದರಿ ಅಧಿಕಾರಿ ಮತ್ತು ನೌಕರರಿಗೆ ವಹಿಸಲಾಗಿರುವ ಕೆಲಸ ಕಾರ್ಯಗಳು ಹಾಗೂ ಜವಬ್ದಾರಿಗಳನ್ನು ವೃಂದವಾರು ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಿರಿಯ ಆರೋಗ್ಯ ಪರಿವೀಕ್ಷಕರು, ಘನತ್ಯಾಜ್ಯ ಪರಿವೀಕ್ಷಕರು, ಕಿರಿಯ ಆರೋಗ್ಯ ವೈದ್ಯಾಧಿಕಾರಿಗಳು, ಉಪ ಆರೋಗ್ಯಾಧಿಕಾರಿಗಳು, ಆರೋಗ್ಯಾಧಿಕಾರಿ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಂತೆ ಮಂಜೂರಾದ ಒಟ್ಟು ಹುದ್ದೆಗಳು, ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು ಮತ್ತು ಖಾಲಿ ಇದ್ದ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ. |

| ಕ್ರ ಸಂ. | ಹುದ್ದೆಯ ವಿವರಗಳು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1) | ಕಿರಿಯ ಆರೋಗ್ಯ ಪರಿವೀಕ್ಷಕರು | 115 | 36 | 79 |
| 2) | ಘನತ್ಯಾಜ್ಯ ಪರಿವೀಕ್ಷಕರು | -- | -- | -- |
| 3) | ಕಿರಿಯ ಆರೋಗ್ಯ ವೈದ್ಯಾಧಿಕಾರಿಗಳು | -- | -- | -- |
| 4) | ಉಪ ಆರೋಗ್ಯಾಧಿಕಾರಿಗಳು | 12 | 7 | 5 |
| 5) | ಆರೋಗ್ಯಾಧಿಕಾರಿ | 6 | 6 | -- |

ಸದರಿ ಅಧಿಕಾರಿ ಮತ್ತು ನೌಕರರಿಗೆ ವಹಿಸಲಾಗಿರುವ ಕೆಲಸ ಕಾರ್ಯಗಳು ಹಾಗೂ ಜವಾಬ್ದಾರಿಗಳ ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.

ನಅಇ 84 ಎಂಎಸ್‌ಯು 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ